# ಕರ್ನಾಟಕ ವಿಧಾನ ಪರಿಷತ್ತು

<table>
<tr><td colspan="2">ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>777 (900)</td></tr>
<tr><td colspan="2">ಸದಸ್ಯರ ಹೆಸರು</td><td>ಶ್ರೀ ಸಿ. ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>24-08-2026</td></tr>
<tr><td colspan="2">ಉತ್ತರಿಸಬೇಕಾದ ಸಚಿವರು</td><td>ಉನ್ನತ ಶಿಕ್ಷಣ ಸಚಿವರು</td></tr>
<tr><td colspan="2">ಪ್ರಶ್ನೆ</td><td>ಉತ್ತರ</td></tr>
<tr><td>(ಅ)</td><td>ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಿ.ಎ ಹಾಗೂ ಬಿ.ಎಸ್ಸಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>(ಆ)</td><td>ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರವೇಶ ಸಂಖ್ಯೆ ತೀವ್ರವಾಗಿ ಕುಸಿಯಲು ಕಾರಣಗಳೇನು; (ಕಳೆದ ಮೂರು ವರ್ಷಗಳ ಜಿಲ್ಲಾವಾರು ಪ್ರವೇಶ ವಿವರ ನೀಡುವುದು)</td><td>ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು Health Allied ಕೋರ್ಸುಗಳು, Physiotherapy ಕೋರ್ಸುಗಳು ಹಾಗೂ ಕಾನೂನು ಕೋರ್ಸುಗಳಿಗೆ ಪ್ರವೇಶಾತಿ ಪಡೆಯುತ್ತಿರುವುದನ್ನು ಗಮನಿಸಲಾಗಿದೆ.<br><br>ಮಂಡ್ಯ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಹಾಸನ ವಿಶ್ವವಿದ್ಯಾನಿಲಯಗಳಲ್ಲಿರುವ ಪದವಿ ಕೋರ್ಸ್ (UG Programs) ಗಳಿಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಪಡೆಯುತ್ತಿರುವುದನ್ನು ಗಮನಿಸಲಾಗಿದೆ.<br><br>ಸುಮಾರು 2000ಕ್ಕೂ ಹೆಚ್ಚು ಪ್ರವೇಶಾತಿಯಾಗುತ್ತಿದ್ದ ಸರ್ಕಾರಿ ಮಂಡ್ಯ ಕಾಲೇಜು, ಪ್ರಸ್ತುತ ಮಂಡ್ಯ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಆದ ನಂತರದಿಂದ ವಿದ್ಯಾರ್ಥಿಗಳ ಪ್ರವೇಶಾತಿ ಇಳಿಮುಖವಾಗಿರುವುದನ್ನು ಗಮನಿಸಲಾಗಿದೆ.<br><br>ಕಳೆದ ಮೂರು ವರ್ಷಗಳ ಜಿಲ್ಲಾವಾರು ಪ್ರವೇಶಾತಿ ವಿವರ ಈ ಕೆಳಕಂಡಂತಿದೆ:-
<table>
<tr><th>District</th><th>2023-24</th><th>2024-25</th><th>2025-26</th></tr>
<tr><td>Chamarajanagara</td><td>7646</td><td>7237</td><td>7123</td></tr>
<tr><td>Hassan</td><td>25043</td><td>22978</td><td>22324</td></tr>
<tr><td>Mandya</td><td>21105</td><td>19093</td><td>17738</td></tr>
<tr><td>Mysuru</td><td>76875</td><td>75572</td><td>75785</td></tr>
<tr><td>Grand Total</td><td>130669</td><td>124880</td><td>122970</td></tr>
</table>
</td></tr>
<tr><td>(ಇ)</td><td>ವಿದ್ಯಾರ್ಥಿಗಳ ಆಸಕ್ತಿಗೆ ತಕ್ಕಂತೆ ಬಿ.ಸಿ.ಎ. ಹಾಗೂ ಬಿ.ಕಾಂ ಅಪ್ರೆಂಟಿಸ್ ಶಿಪ್ (AEDC) ನಂತರ ಕೌಶಲ್ಯಾಧಾರಿತ ಕೋರ್ಸುಗಳ ಸೀಟುಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು;</td><td>ವಿದ್ಯಾರ್ಥಿಗಳ ಆಸಕ್ತಿಗೆ ತಕ್ಕಂತೆ ಉದ್ಯೋಗ ಆಧಾರಿತ Apprenticeship Embedded Degree Programs (AEDPs) ಕೋರ್ಸ್‌ಗಳನ್ನು ವಾಣಿಜ್ಯಶಾಸ್ತ್ರ ವಿಭಾಗದಲ್ಲಿ 2024-25ನೇ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯು ಯು.ಜಿ.ಸಿ ಮಾರ್ಗಸೂಚಿಗಳನ್ವಯ ಸ್ನಾತಕ ಪದವಿ ಹಂತದಲ್ಲಿ ಪ್ರಾರಂಭಿಸಲಾಗಿದೆ. ಸದರಿ ಕೋರ್ಸ್‌ಗಳು ಉನ್ನತ</td></tr>
</table>

<table>
<tr>
<td></td>
<td></td>
<td>ಶಿಕ್ಷಣದಲ್ಲಿ ಉದ್ಯೋಗಾವಕಾಶವನ್ನು ವರ್ಧಿಸುವ ಹಾಗೂ ಕೈಗಾರಿಕಾ ಬೇಡಿಕೆಗಳಿಗೆ ಅನುಗುಣವಾಗಿರುವ ಕೋರ್ಸ್‌ಗಳಾಗಿರುವುದನ್ನು ಮನಗಂಡು ಹಾಗೂ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯನ್ನು ತೋರಿಸಿದ್ದರಿಂದ 2026-27ನೇ ಸಾಲಿನಲ್ಲಿ AEDP ಕೋರ್ಸ್‌ಗಳನ್ನು ಹೆಚ್ಚಿನ ಕಾಲೇಜುಗಳಲ್ಲಿ ಪ್ರಾರಂಭಿಸಿ, ಪ್ರವೇಶಾತಿಗಾಗಿ ಸೀಟುಗಳನ್ನು ಸಹ ಹೆಚ್ಚಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.
<table>
<tr><th>ಶೈಕ್ಷಣಿಕ ವರ್ಷ</th><th>ಕಾಲೇಜುಗಳು</th><th>ಸೀಟುಗಳು</th></tr>
<tr><td>2024-25</td><td>5</td><td>300</td></tr>
<tr><td>2025-26</td><td>8</td><td>480</td></tr>
<tr><td>2026-27</td><td>19</td><td>1140</td></tr>
</table>
</td>
</tr>
<tr>
<td>(ಈ)</td>
<td>ಸಾಂಪ್ರದಾಯಿಕ ಕಲಾ ಮತ್ತು ವಿಜ್ಞಾನ ಕೋರ್ಸುಗಳನ್ನು ಪ್ರಸ್ತುತ ಉದ್ಯೋಗ ಮಾರುಕಟ್ಟೆಗೆ ತಕ್ಕಂತೆ ನವೀಕರಿಸಲು ಸರ್ಕಾರ ರೂಪಿಸಿರುವ ಕಾರ್ಯಯೋಜನೆಗಳೇನು?</td>
<td>ಸಾಂಪ್ರದಾಯಿಕ ಕಲಾ ಮತ್ತು ವಿಜ್ಞಾನ ಕೋರ್ಸ್‌ಗಳನ್ನು ಪ್ರಸ್ತುತ ಉದ್ಯೋಗ ಮಾರುಕಟ್ಟೆಗೆ ತಕ್ಕಂತೆ ನವೀಕರಿಸಲು, 2027-28ನೇ ಸಾಲಿನಿಂದ ಕಲಾ ಮತ್ತು ವಿಜ್ಞಾನ ವಿಭಾಗಗಳಲ್ಲಿ Apprenticeship Embedded Degree Programs (AEDPs) ಕೋರ್ಸ್‌ಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.<br><br>ಮುಂದುವರೆದು, ಸದರಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ಜೀವನ-ಕೌಶಲ್ಯ ತರಬೇತಿಗಳನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ ಸುಮಾರು 20 ಕ್ಕೂ ಹೆಚ್ಚು ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡಿದೆ. ಈ ಒಡಂಬಡಿಕೆಗಳಲ್ಲಿ ಉನ್ನತಿ ಫೌಂಡೇಶನ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (FKCCI)ಯ ಸಹಭಾಗಿತ್ವದಲ್ಲಿ INNO-ಮಂಥನ್ ಕಾರ್ಯಕ್ರಮ, Mentor Together ಸಂಸ್ಥೆ ವತಿಯಿಂದ ಫೌಂಡೇಶನಲ್ ಮೆಂಟರಿಂಗ್ ಮೂಲಕ ಜೀವನ ಕೌಶಲ್ಯಗಳು ಹಾಗೂ ಪ್ಲೇಸ್ಮೆಂಟ್ ಸಪೋರ್ಟ್ ಮೆಂಟರಿಂಗ್ ಮೂಲಕ ಉದ್ಯೋಗ ಸಿದ್ಧತಾ ಕೌಶಲ್ಯಗಳ ತರಬೇತಿಗಳು ಪ್ರಮುಖವಾಗಿರುತ್ತವೆ.</td>
</tr>
</table>

ಇಡಿ 283 ಡಿಸಿಇ 2026 (ಇ)

**(ಬಸವರಾಜ ರಾಯರೆಡ್ಡಿ)**
ಉನ್ನತ ಶಿಕ್ಷಣ ಸಚಿವರು